ಎಲ್ಲದರ ಜೊತೆ ಮಾತಿಗೆ ಕೂರತೊಡಗಿದಳು. ಸಿಕ್ಕ ಸಿಕ್ಕವರ ಮೇಲೆ ಕಾರಣವಿಲ್ಲದೆ ರೇಗತೊಡಗಿದಳು. ಒಮ್ಮೊಮ್ಮೆ ಅವಳ ನಡೆವಳಿಕೆಯನ್ನು ಕಂಡರೆ ಅವಳಿಗೆ ಬುದ್ಧಿ ಭ್ರಮಣೆಯಾಗಿರಬಹುದೇ ಎಂದೆನ್ನಿಸತೊಡಗಿತು. ಹಸು, ಕರುಗಳ ಬೇಕಂತಲೇ ಕಂಡವರ ಗದ್ದೆ ತೋಟಗಳಿಗೆ ಬಿಡುತ್ತಿದ್ದಳು. ಮತ್ಯಾರದೋ ಮನೆಯ ಹಸುವಿನ ಹಾಲು ಕರೆದು ತಂದು ಕಾಫಿ ಮಾಡುತ್ತಿದ್ದಳು. ಬರುವ ನೆಂಟರ ಮೇಲೆ ಮನೆಯ ನಾಯಿಗಳನ್ನು ಛೂ ಬಿಟ್ಟು ಪಂಚೆ ಸೀರೆ ಹರಿಸುತ್ತಿದ್ದಳು. ಹೀಗೆ ಅವಳು ಮಾಡದ ಹರಕತ್ತುಗಳೇ ಇರಲಿಲ್ಲ ಎಂದೆನ್ನಬೇಕು. ಅರವತ್ತಕ್ಕೆ ಅರುಳು ಮರುಳಿರಬೇಕು ಅನ್ನಿಸುತ್ತಿದ್ದರೂ ಅವಳಿಗೆ ಇನ್ನೂ ಐವತ್ತೂ ನೆಟ್ಟಗೆ ದಾಟಿರಲಿಲ್ಲ. ಆಗಲೇ ಎಪ್ಪತ್ತರ ಹಾಗೆ ಕಾಣುತ್ತಿದ್ದಳು. ಅವಳ ತರಲೆ ತಾಪತ್ರಯಗಳನ್ನು ಸಹಿಸಿ ಸಹಿಸಿ ಸಾಕಾಗಿದ್ದ ಮನೆಯವರು ಅವಳನ್ನು ಹೊರ ಹಾಕಲು ಸಾಕಷ್ಟು ಬಾರಿ ಪ್ರಯಾಸ ಪಟ್ಟು ಬಳಲಿದವರಂತೆ ಕಾಣುತ್ತಿದ್ದರಾದರೂ ಸಫಲರಾಗಿರಲಿಲ್ಲ.

ಆದರೆ ಅವರ ಅದೃಷ್ಟಕ್ಕೋ ಭಾಗೀರಥಿಯ ದುರದೃಷ್ಟಕ್ಕೋ ಅಂತಹದ್ದೊಂದು ಅವಕಾಶ ಬಲು ಬೇಗ ಮನೆಯವರಿಗೆ ಸಿಕ್ಕಿಯೇ ಬಿಟ್ಟಿತು. ಊರ ಮಠಕ್ಕೆ ಆಶೀರ್ವಚನಕ್ಕೆ ಬಂದಿದ್ದ ಗುರುಗಳೊಬ್ಬರು ಫಲ ಮಂತ್ರಾಕ್ಷತೆಯನ್ನು ಊರಿನ ಎಲ್ಲ ಹೆಂಗಸರಿಗೆ, ಗಂಡಸರಿಗೆ ನೀಡುತ್ತ ಆಶೀರ್ವಾದ ಮಾಡುತ್ತಿದ್ದರು. ಈಕೆಯೂ ತಲೆಯ ಮೇಲೆ ಸೆರಗು ಹೊದ್ದು ಸರತಿಯಲ್ಲಿ ನಿಂತಿದ್ದಳು. ಮುತ್ತೈದೆ ಹೆಂಗಸರ ನಮಸ್ಕಾರಗಳನ್ನು ನಿಮಿರುಗಣ್ಣಿನಲಿ ನೋಡುತ್ತ ಶಲ್ಯ ಹೊದ್ದ ಗಂಡಸರ ನಮಸ್ಕಾರಗಳನ್ನು ಅವಗಣನೆ ಮಾಡುತ್ತ, ಜಗದ ಇರುವನ್ನೇ ಮರೆತಿದ್ದ ಬಿಳಿ ಪೊದರು ಮೀಸೆಯ ಗುರುಗಳು ಇವಳು ಬಂದು ಎದುರು ನಿಂತೊಡನೆ ಮುಖ ತಿರುಗಿಸಿಬಿಟ್ಟರು. ಈಕೆಗೆ ರೇಗಿ ಹೋಯಿತು. 'ನೀನೆಂತ ಗುರೂನಯ್ಯಾ, ಮುಂಡೆ ಬಂದ್ಲು ಅಂತ ಮುಖ ತಿರುಗಿಸ್ತೀಯಲ್ಲ' ಎಂದುಬಿಟ್ಟಳು. ನೆರದಿದ್ದ ಸಮಸ್ತ ಊರಿನ ಜನ ಗಾಬರಿ ಬಿದ್ದು ಹೋದರು. ಬಹಿರಂಗದ ಈ ಅವಮಾನದಿಂದ ಕಣ್ಣಿಗೆ ಕೆಂಡ ಹಚ್ಚಿಕೊಂಡ ಗುರುಗಳು ತಮ್ಮ ಕಮಂಡಲದ ನೀರನ್ನು ನೆಲಕ್ಕೆ ಸುರಿದುಕೊಳ್ಳುತ್ತ ಮರದ ಪಾದರಕ್ಷೆಯನ್ನು ಕೊಟ್ ಕೊಟ್ ಎನ್ನಿಸುತ್ತ ಎದ್ದು ಹೊರಟೇಬಿಟ್ಟರು. ಯಾರೊಬ್ಬರು ಸಮಾಧಾನಿಸಿದರೂ ಗುರುಗಳ ಮುಖದ ಗಂಟು ಕಿಂಚಿತ್ತು ಕಡಿಮೆಯಾಗಲಿಲ್ಲ. ಹಾಗವರು ಎದ್ದು ಹೋಗಿದ್ದೇ ತಡ ಅಲ್ಲಿದ್ದ ಭಕ್ತ ಮಹಾಶಯರು ತಮ್ಮ ಗುರುಗಳಿಗೆ ಹೀಗೆ ಸಾರ್ವಜನಿಕವಾಗಿ ಎದುರು ನಿಂತಿದ್ದನ್ನು ಅವಮಾನಿಸಿದ್ದನ್ನು ಕ್ಷಮಿಸಲು ಶಕ್ಯವೇ ಇಲ್ಲ ಎನ್ನಿಸಿತು. ಹರಕು ಲಂಗೋಟಿಯ ಮುದುಕರಿಂದ ಹಿಡಿದು ಪ್ಯಾಂಟು ಶಲ್ಯದ ಪಡ್ಡೆಗಳೂ ಸೇರಿ ಆಕೆಯನ್ನು ದರದರನೆ ಎಳೆದು ಹೊರಗೆ ತಳ್ಳಿಯೇ ಬಿಟ್ಟರು. ಯಾರೊಬ್ಬರೂ ಅವಳ ಪರ ನಿಲ್ಲಲಿಲ್ಲ. ಹಾಗೆ ಅವಳು ಹೊರಗೆ ದಬ್ಬಿಸಿಕೊಂಡು ಬರುವಾಗಲೂ, 'ಮುಂಡೇರೇನು ಹುಟ್ತಾನೆ ಆಗ್ತಾರೇನೋ, ನಿಮ್ಮಂತ ಗಂಡಸರು ಮಾಡೋದು' ಎಂದು ಕೂಗಿ ಬಂದಿದ್ದಳು. ಅದು ಅಲ್ಲಿಯೇ ಮಠದ ಮೂಲೆಯಲ್ಲಿ ಕೆಂಪು ಸೀರೆಯಲ್ಲಿ ಮುಖಮುಚ್ಚಿ ಕೂತಿದ್ದ ಬೋಳು ಮಂಡೆಯ ಸಕೇಶಿಯರಿಗೆ ಇಷ್ಟವಾಗಿದ್ದರೂ, ಕರಿಮಣಿಯನ್ನು ಕಣ್ಣಿಗೊತ್ತಿಕೊಳ್ಳುವ ಮುತ್ತೈದೆಯರಿಗೆ ಹಿಡಿಸಿರಲಿಲ್ಲ. ಅವರು ತಮ್ಮ ತಮ್ಮ ಕರಿಮಣಿ ಸರದ ತಾಳಿಗಳನ್ನು ಕಣ್ಣಿಗೆ ಒತ್ತಿಕೊಳ್ಳುತ್ತಲೇ ಇವಳಿಗೆ ಹಿಡಿಶಾಪ ಹಾಕಿದರು. ಗಂಡಸರಂತೂ ಉರಿಉಚ್ಚೆ ಶುರುವಾದವರ ಹಾಗೆ ತಮ್ಮ ತಮ್ಮ ಹೆಂಡತಿಯರ ಕಡೆ ನೋಡುತ್ತಲೇ ಅವಳ ರಟ್ಟೆಗೆ ಕೈ ಹಚ್ಚಿದ್ದರು.

ಇನ್ನು ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದ ಶಾರದೆಯ ಮಾವಂದಿರಿಗಂತೂ ನವರಂಧ್ರಗಳಲ್ಲಿ ನವೆ ಎದ್ದಿತ್ತು. ಹಾಳು ರಂಡೆಯ ಕಾರಣಕ್ಕೆ ಹತ್ತು ಊರಿನವರ ಮುಂದೆ ಮಾನ